ಅ) 1984-85

ಆ) ಒದಗಿಸಿಲ್ಲ

ಇ) ಈ ವರ್ಷದಲ್ಲಿ ಬೇಡಿಕೆ ಅನುಗುಣವಾಗಿ ಈ ಕಾಲೇಜಿಗೆ ಡೆಸ್ಕ್‌ಗಳು ಹಾಗು ಪೀಠೋಪಕರಣಗಳನ್ನು ಒದಗಿಸಲು ವಿಪ್ರಾಡು ಮಾಡಲಾಗುವುದು.

ಈ) ಜವಾನರು ಹುದ್ದೆ ಮಂಜೂರಾತಿ -01 ಮಂಡಲ ಪಂಚಾಯಿತಿ ಮೂಲಕ ಒಬ್ಬ ಜವಾನರ ಸೇವೆಯನ್ನು ಪಡೆದುಕೊಳ್ಳಲಾಗಿದೆ.

ಉ) ಆರ್ಥಿಕ ಮಿತವ್ಯಯ ಸಡಲಿಸಿದ ನಂತರವೇ ಸರ್ಕಾರವು ಈ ಕ್ರಮವನ್ನು ಕೈಗೊಳ್ಳಲೂ ಸಾಧ್ಯ.

ಹಸಿರು ಪಡಿತರ ಚೀಟಿಗಳ ವಿತರಣೆ

2379 - ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಸಿರು ಕಾರ್ಡುಗಳ ವಿತರಣೆಯನ್ನು ಮನಃ ಬಂದಂತೆ ಮಾಡಲಾಗಿದೆಯೇ ಮತ್ತು ಸಾಕಷ್ಟು ಅರ್ಹ ಕುಟುಂಬಗಳು ಇಂತಹ ಕಾರ್ಡುಗಳಿಂದ ವಂಚಿತರಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಎಲ್ಲ ಹಸಿರು ಕಾರ್ಡುಗಳನ್ನು ಹಿಂದಕ್ಕೆ ಪಡೆದು ಬೇರೆ ಬಣ್ಣದ ಕಾರ್ಡುಗಳನ್ನು ಪ್ರಾಮಾಣಿಕ ಅರ್ಹ ಕುಟುಂಬಗಳಿಗೆ ನೀಡುವ ಬಗೆಗೆ ಸರ್ಕಾರವು ಯೋಚಿಸಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

1) ಹಸಿರು ಕಾರ್ಡುಗಳ ವಿತರಣೆಯನ್ನು ಮನಃ ಬಂದಂತೆ ಮಾಡಲಾಗಿಲ್ಲ. ಆದರೂ ಕೆಲವು ಅರ್ಹ ಕುಟುಂಬಗಳು ಇಂತಹ ಕಾರ್ಡುಗಳಿಂದ ವಂಚಿತರಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ.

2) ಎಲ್ಲಾ ಅರ್ಹತೆ ಹೊಂದಿರುವ ಕುಟುಂಬಗಳಿಗೆ ಹಸಿರು ಕಾರ್ಡು ನೀಡುವ ಬಗ್ಗೆ ಈಗಾಗಲೇ ಸೂಚನೆ ನೀಡಲಾಗಿದೆ. ಆದರೆ ಬೇರೆ ಬಣ್ಣದ ಕಾರ್ಡುಗಳನ್ನು ನೀಡುವ ಬಗ್ಗೆ ಸರ್ಕಾರ ಇದರ ಬಗ್ಗೆ ಯಾವ ಅಂತಿಮ ತೀರ್ಮಾನಕ್ಕೆ ಬಂದಿರುವುದಿಲ್ಲ.

ಮೂಡಿಗೆರೆ ತಾಲ್ಲೂಕಿನಲ್ಲಿ ಹರಿಜನ ಬಸ್ತಿಗಳಿಗೆ ವಿದ್ಯುದ್ದೀಕರಣ

2134 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ನೇ ಸಾಲಿನ ಮೂಡಿಗೆರೆ ತಾಲ್ಲೂಕಿನಲ್ಲಿ ಹರಿಜನ ಬಸ್ತಿ ಹರಿಜನ ಕಾಲೋನಿ, ಹ್ಯಾಮಲೆಟ್ ಗ್ರಾಮಗಳ ವಿದ್ಯುದ್ದೀಕರಣಕ್ಕಾಗಿ ಸರಕಾರ ಹಾಕಿಕೊಂಡಿರುವ ಗುರಿ ಎಷ್ಟು?

ಆ) ಮೂಡಿಗೆರೆ ತಾಲ್ಲೂಕಿನಲ್ಲಿ ಉಳಿದಿರುವ 109 ಹ್ಯಾಮಲೆಟ್ ಗ್ರಾಮಗಳ 78 ಹರಿಜನ ಬಸ್ತಿಗಳ, 89ಹರಿಜನ ಕಾಲೋನಿಗಳ ವಿದ್ಯುದ್ದೀಕರಣ ಪೂರ್ಣಗೊಳಿಸಲು ಸರ್ಕಾರಕ್ಕೆ ಇನ್ನೂ ಬೇಕಾಗಿರುವ ಕಾಲಾವಕಾಶ ಎಷ್ಟು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) :

ಅ) 1991-92ನೇ ಸಾಲಿನ ಮೂಡಿಗೆರೆ ತಾಲ್ಲೂಕಿನಲ್ಲಿ 30 ಹ್ಯಾಮ್ಲೆಟ್‌ಗಳನ್ನು ಹಾಗೂ 30 ಹರಿಜನ ಬಸ್ತಿ ಗಿರಿಜನ ಕಾಲೋನಿಗಳನ್ನು ವಿದ್ಯುದ್ದೀಕರಿಸಲು ಗುರಿಯನ್ನು ನಿಗಧಿಪಡಿಸಿದೆ.